
# ಕುಬೇರನ ಗರ್ವಭಂಗ

ತಮಿಳು ಮೂಲ : ಆರ್.ವಿ.

ಕನ್ನಡ : ಸ್ವಾಮಿ ರಾಘವೇಶಾನಂದ


ಚಿತ್ರ : ಶಂಕರ್

ಒಮ್ಮೆ ಐಶ್ವರ್ಯದೇವತೆಯಾದ ಕುಬೇರ ಶಿವನನ್ನು ವಂದಿಸಲು ಬಂದನು. ತನ್ನ ಬಳಿ ಅಷ್ಟೊಂದು ಐಶ್ವರ್ಯವಿದ್ದರೂ, ಶಿವನಿಗೆ ಕಾಣಿಕೆಯಾಗಿ ಕೊಡಲು ಕೇವಲ ಒಂದು ಬಾಳೆಹಣ್ಣಿನ ಗೊನೆಯನ್ನು ಮಾತ್ರ ತಂದಿದ್ದನು. ಶಿವನ ಮಗನಾದ ಗಣೇಶನಿಗೆ ಕುಬೇರನ ಜಿಪುಣತನವನ್ನು ನೋಡಿ ನಗು ಬಂದಿತು. ಅವನು ಕುಬೇರನ ಕೈಯಿಂದ ಆ ಹಣ್ಣುಗಳನ್ನು ಕಿತ್ತುಕೊಂಡು ಒಂದೇ ಸಲಕ್ಕೆ ಅದನ್ನೆಲ್ಲಾ ನುಂಗಿದನು.




ಶಿವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ ನಂತರ ಕುಬೇರ ...





4
ಭೋಜನ ಸಾಕಷ್ಟು ಅದ್ದೂರಿಯಾಗಿರಲಿ. ಎಷ್ಟು ಭಕ್ಷ್ಯಗಳನ್ನು ತಯಾರಿಸಲು ಸಾಧ್ಯವಾಗುವುದೋ ಅಷ್ಟನ್ನೂ ತಯಾರಿಸು.
ಗಣೇಶನ ಕಾಲುಗಳು ಕೆಸರಾಗಿದ್ದವು. ಅವನು ನಡೆಯುತ್ತಿದ್ದಂತೆ ನೆಲದ ಮೇಲೆ ಹಾಸಿದ್ದ ರತ್ನಕಂಬಳಿಗಳೆಲ್ಲಾ ಹಾಳಾದವು.
ಕುಬೇರ ತನ್ನ ಮಂತ್ರಿಗಳನ್ನೆಲ್ಲಾ ಕರೆದು ಭೋಜನಕ್ಕೆ ದೊಡ್ಡ ದೊಡ್ಡ ಏರ್ಪಾಡುಗಳನ್ನು ಮಾಡಲು ತಿಳಿಸಿದ.
ನಮ್ಮ ವೈಭವವನ್ನು ತೋರಿಸಲು ಇದು ಸದವಕಾಶ. ಹಿಂದೆಂದೂ ಯಾರೂ ಕೊಟ್ಟಿರದಂತಹ ಅದ್ದೂರಿಯ ಔತಣವಾಗುವಂತೆ ಎಲ್ಲಾ ಏರ್ಪಾಡು ಮಾಡಿ.
5
ಹಾಗೇ ಆಗಲಿ, ಪ್ರಭು!
ಮರುದಿನ ಊರಿಗೆ ಊರೇ ಶೃಂಗರಿಸಲ್ಪಟ್ಟಿತು. ಎಲ್ಲಿ ನೋಡಿದರೂ ಮಂಗಳ ವಾದ್ಯಗಳು, ಚಪ್ಪರ ತೋರಣಗಳು, ಪರಮೇಶ್ವರನನ್ನು ಸ್ವಾಗತಿಸಲು ಶಾಸ್ತ್ರೀಯ ಸಂಗೀತ, ವಾದ್ಯ, ವೇದ ಘೋಷಗಳೊಡನೆ ಊರಿಗೆ ಊರೇ ಕಾದಿತ್ತು. ಶಿವ ಪಾರ್ವತೀ, ಗಣೇಶ ಹಾಗೂ ಕಾರ್ತಿಕೇಯರೊಡನೆ ಬರುತ್ತಿದ್ದಂತೆಯೇ ದೇವತೆಗಳು ಅವರ ಮೇಲೆ ಪುಷ್ಪವೃಷ್ಟಿ ಸುರಿಸಿದರು.
6
7
ಕುಬೇರ ಗಣೇಶನನ್ನು ಗದರಿಸಿದ.
ಏನಿದು? ಮೈಯಲ್ಲಾ ಕೆಸರಿನಿಂದ ತುಂಬಿದೆಯಲ್ಲಾ.
8
ನಿನ್ನ ಮೇಲೆ ಕೆಟ್ಟ ದೃಷ್ಟಿ ಬೀಳದೆ ಇರಲೆಂದು ನಾನು ಉದ್ದೇಶ ಪೂರ್ವಕವಾಗಿಯೇ ಹೀಗೆ ಬಂದೆ.
ನಡುಮನೆಯಲ್ಲಿ....
ಅದಿರಲಿ, ಊಟದ ಮನೆ ಎಲ್ಲಿ? ನನಗೆ ತುಂಬಾ ಹಸಿವಾಗುತ್ತಿದೆ.
ಅತ್ತ ಇದೆ ನೋಡು. ಅದೇ ಊಟದಮನೆ.
9


ಗಣೇಶ ಊಟದ ಮನೆಯನ್ನು ಹೊಕ್ಕ.
ಸೇವಕರೇ, ಬೇಗ ಊಟ ಬಡಿಸಿ. ಎಲ್ಲರಿಗೂ ಸಾಕಾಗುವಷ್ಟು ಅಡಿಗೆ ಮಾಡಿದ್ದೀರಿ ತಾನೇ!
10
ಹೌದು ಸ್ವಾಮೀ, ಎಲ್ಲಾ ಧಾರಾಳವಾಗಿದೆ.
ಆದರೆ ಗಣೇಶ, ಬಡಿಸಿದ್ದಷ್ಟನ್ನೇ ಅಲ್ಲ, ಮತ್ತೆ ಮತ್ತೆ ತರಿಸಿಕೊಂಡು ಅವರು ಮಾಡಿದ್ದ ಅಡುಗೆಯನ್ನೆಲ್ಲಾ ಮುಗಿಸಿದ.
ಇನ್ನೂ ಹಸಿವಾಗುತ್ತಿದೆಯೆಲ್ಲಾ? ಬೇರೇನಿದೆ, ಹೇಳಿ.
ಸ್ವಲ್ಪ ತಾಳಿಕೊಳ್ಳಿ. ಕ್ಷಣಾರ್ಧದಲ್ಲಿ ಮತ್ತೆ ಅಡಿಗೆ ಮಾಡಿ ಬಡಿಸುತ್ತೇವೆ.
11
ಇಷ್ಟೇನಾ? ನನ್ನ ಹಸಿವಿಗೆ ಇದೆಲ್ಲಾ ಏನೇನೂ ಸಾಕಾಗುವುದಿಲ್ಲ.
12
ಬುಟ್ಟಿಗಟ್ಟಲೆ ಹಣ್ಣು, ತರಕಾರಿಗಳನ್ನು ತಂದಿಟ್ಟರು. ಸೇವಕರಿಗೆಲ್ಲಾ ಸಾಕೋ ಸಾಕಾಯಿತು.
13
ಗಣೇಶ ಬೇಯಿಸದ ಆಹಾರ ವಸ್ತುಗಳನ್ನೂ ಬಿಡಲಿಲ್ಲ. ಅಕ್ಕಿ, ಬೇಳೆ ಮುಂತಾದವನ್ನೂ ತಿಂದುಬಿಟ್ಟ. ಉಗ್ರಾಣವೇ ಖಾಲಿಯಾಯಿತು.
ಎಂತಹ ಔತಣ ಇದು! ನನ್ನ ಅರ್ಧ ಹೊಟ್ಟೆಯೂ ತುಂಬಲಿಲ್ಲವಲ್ಲ. ಕುಬೇರನಿಗೆ ಆಹಾರ ಖಾಲಿಯಾಯಿತು ಎಂದು ತಿಳಿಸಿ.
14
15
ಇಲ್ಲಿ ಮತ್ತೇನು ಉಳಿದಿದೆ. ಬರಿ ಸೌದೆ. ಅದನ್ನೂ ನುಂಗಿ ಬಿಡೋಣ. ತನ್ನ ಧನ ಮದದಿಂದ ದೊಡ್ಡಸ್ತಿಕೆ ತೋರಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕುಬೇರನಿಗೆ ಈಗ ಸರಿಯಾದ ಪಾಠ ಕಲಿಸಿದಂತಾಗುತ್ತದೆ.


ಸರಿ, ಮತ್ತೆ ಅಡಿಗೆ ಮಾಡಲು ಶುರುಮಾಡಿ.
16
ಈ ಪಟ್ಟಣದಲ್ಲಿ ಮತ್ತೆ ಅಡಿಗೆ ಮಾಡಲು ಏನೇನೂ ಉಳಿದಿಲ್ಲ.
ಕುಬೇರನಿಗೆ ತನ್ನ ತಪ್ಪಿನ ಅರಿವಾಗಿ ಶಿವನ ಮುಂದೆ ಅಡ್ಡಬಿದ್ದ.
ಮಹಾದೇವ! ನನ್ನ ಅಹಂಕಾರ ಸಂಪೂರ್ಣವಾಗಿ ನಾಶವಾಯಿತು. ನಿನ್ನ ಮುಂದೆ ನನ್ನ ದೊಡ್ಡಸ್ತಿಕೆ ತೋರಿಸಿಕೊಳ್ಳಬೇಕೆಂದಿದ್ದೆ. ಗಣೇಶ ಸರಿಯಾದ ಪಾಠ ಕಲಿಸಿದ.
17
ಗಣೇಶನ ಬಳಿ ಹೋಗಿ ಕ್ಷಮೆ ಬೇಡಿಕೊ.
ಕುಬೇರ ಗಣೇಶನ ಬಳಿ ಹೋದ.
ಓ ಗಣೇಶ, ನಾನು ನಿಮ್ಮ ಮಹಿಮೆಯನ್ನು ಅರಿಯದೆ, ನನ್ನ ದೊಡ್ಡಸ್ತಿಕೆ ತೋರಿಸಿಕೊಳ್ಳಲು ಅಹಂಕಾರದಿಂದ ಈ ಭೋಜನವನ್ನು ಏರ್ಪಾಡು ಮಾಡಿದೆ. ನನ್ನಲ್ಲಿ ಸ್ವಲ್ಪವೂ ಭಕ್ತಿಯಿರಲಿಲ್ಲ. ನೀನು ನನ್ನ ಕಣ್ಣು ತೆರೆಸಿದೆ. ದಯವಿಟ್ಟು ನನ್ನನ್ನು ಕ್ಷಮಿಸಿ ಬಿಡು.
ಭಕ್ತಿಯಿಂದ ಅರ್ಪಿಸಿದ ಒಂದೇ ಒಂದು ಹಣ್ಣಿನಿಂದ ನಾನು ತೃಪ್ತನಾಗುವೆನು.
18
ಇನ್ನು ಈ ಲೀಲೆ ನಿಲ್ಲಿಸಬೇಕೆಂದು ಮಹಾದೇವನು ಅಲ್ಲಿಗೆ ಬಂದನು.
ಮಗನೇ! ಇಷ್ಟು ಸಾಕು. ಕುಬೇರನನ್ನು ಇನ್ನು ಕೀಟಲೆ ಮಾಡಬೇಡ. ಈ ಅವಲಕ್ಕಿಯನ್ನು ತಿಂದು ನಿನ್ನ ಹಸಿವನ್ನು ನೀಗಿಸಿಕೊ.
19